ರಾಜ್ಯದ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ಶುದ್ದೀಕರಣ.

1-ಶ್ರೀ ಕೆ. ಹರ್ಷಕುಮಾರ್‌ಗೌಡ (ಚಾಮರಾಜ) : ಮಾನ್ಯ ಗ್ರಾಮೀಣಾಬಿವೃದ್ದಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಗ್ರಾಮಾಂತರ ಪ್ರದೇಶಗಳ ನಾಗರೀಕರಿಗೆ ಕುಡಿಯುವ ನೀರಿನ ಶುದ್ಧೀಕರಣದ ಯೋಜನೆಯಡಿಯಲ್ಲಿನ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಈವರೆಗೆ ಬಿಡುಗಡೆ ಆಗಿರುವ ಹಣವೆಷ್ಟು?

ಆ) ಈ ಕಾರ್ಯಕ್ರಮವನ್ನು ರಾಜ್ಯದ ಯಾವ ಯಾವ ಜಿಲ್ಲೆ ಮತ್ತು ಗ್ರಾಮಗಳಲ್ಲಿ ಅಳವಡಿಸಲಾಗಿದೆ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಬಿವೃದ್ದಿ ಮತ್ತು ಪಂಚಾಯತ್ ಇಲಾಖೆ ಸಚಿವರು) :

ಅ) ರೂ. 36.17 ಲಕ್ಷಗಳು.

ಆ) 1) ಒಂದು ದಿನಕ್ಕೆ ತಲಾ 20 ಲೀಟರ್‌ನಷ್ಟು ಪರಿಶುದ್ದವಾದ ಕುಡಿಯುವ ನೀರನ್ನು ಸರಬರಾಜು ಮಾಡಲು ಧಾರವಾಡ ಜಿಲ್ಲೆಯ ಈ ಕೆಳಕಂಡ ಗ್ರಾಮಗಳಲ್ಲಿ ಡಿಫ್ಲೋರಿಡೇಷನ್ ಯಂತ್ರಗಳನ್ನು ಅಳವಡಿಸದೆ ಇವುಗಳು ಇನ್ನೂ ಚಾಲನೆಯಲ್ಲಿಲ್ಲ. ವಿದ್ಯುಚ್ಛಕ್ತಿಗೋಸ್ಕರ ಕಾಯಲಾಗಿದೆ.

ಮುಂಡರಗಿ ತಾಲ್ಲೂಕು : 1) ಡಂಬಳಗ್ರಾಮ
2) ಮೇವುಂಡಿ ಗ್ರಾಮ

2) ಕೇಂದ್ರ ಸರ್ಕಾರವು ನೇರವಾಗಿಯೇ ಕರಾರು ಮಾಡಿ ಕೊಂಡು, 9 ಡಿಫ್ಲೋರಿಡೇಷನ್ ಯಂತ್ರಗಳನ್ನು (ಕೈಪಂಪಿಗೆ ಜೋಡಿಸುವಂತಹ) ಈ ಕೆಳಕಂಡ 7 ಹಳ್ಳಿಗಳಲ್ಲಿ ಅಳವಡಿಸಲಾಗಿದೆ.

ಕ್ರ ಸಂ	ಜಿಲ್ಲೆ	ತಾಲ್ಲೂಕು	ಹಳ್ಳಿ	ಯಂತ್ರಗಳ ಸಂಖ್ಯೆ
1.	ಧಾರವಾಡ	ಮುಂಡರಗಿ	ನಾರಾಯಣಪುರ	1
2.	ಧಾರವಾಡ	ಮುಂಡರಗಿ	ಡಿ.ರಾಮನಹಳ್ಳಿ	2
3.	ಧಾರವಾಡ	ಮುಂಡರಗಿ	ಬರದೂರು	1
4.	ಧಾರವಾಡ	ಮುಂಡರಗಿ	ಹಲ್ಕಾಪೂರ	1
			ಉಪಮೊತ್ತ	5
5.	ಗುಲ್ಬರ್ಗಾ	ಶೋರಾಪುರ	ಗೋದ್ರಿಹಾಳ	2
6.	ತುಮಕೂರು	ಪಾವಗಡ	ಕಡಮಾಳಕುಂಟೆ	1
7.	ತುಮಕೂರು	ಪಾವಗಡ	ತಾಪಗಾನದೊಡ್ಡಿ	1
			ಉಪಮೊತ್ತ	2
			ಮೊತ್ತ	೯

ಶ್ರೀ ಕೆ. ಹರ್ಷಕುಮಾರ್ ಗೌಡ : ಕರ್ನಾಟಿಕ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿರತಕ್ಕ ಜನತೆಗೆ ಕುಡಿಯುವ ನೀರಿನ ಶುದ್ದೀಕರಣ ಯೋಜನೆಯಲ್ಲಿ

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆ ಆದ ಹಣ 36 ಲಕ್ಷ ಚಿಲ್ಲರೆ ಎಂದು ಹೇಳಿದ್ದಾರೆ. ಎಲ್ಲಾ ಗ್ರಾಮಗಳಿಗೂ ಶುದ್ದೀಕರಣ ಯಂತ್ರಗಳನ್ನು ಅಳವಡಿಸಿಕೊಳ್ಳಲು ಕೇಂದ್ರ ಸರ್ಕಾರ ಯೋಜನೆಗಳನ್ನು ಹಮ್ಮಿಕೊಂಡಿದೆ. ಆದರೆ ರಾಜ್ಯದಲ್ಲಿ ಕೇವಲ 7 ಗ್ರಾಮಗಳಲ್ಲಿ ಸುಮಾರು ಒಂಭತ್ತು ಶುದ್ದೀಕರಣ ಯಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆಯೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಇದಕ್ಕೆ ಕಾರಣಗಳು ಏನು? ಕೆಂದ್ರ ಸರ್ಕಾರ ಇದರಲ್ಲಿ ತಾರತಮ್ಯ ಮಾಡಿದೆಯೇ ಅಥವಾ ಅಧಿಕಾರಿಗಳು ಲೋಪ ಮಾಡಿದ್ದಾರೆಯೇ? ಇದರಲ್ಲಿ ಅಧಿಕಾರಿಗಳ ಬೇಜಾವಾಬ್ದಾರಿ ಏನಾದರೂ ಇದೆಯೇ? ಏಕೆಂದರೆ ಇದು ಗ್ರಾಮೀಣ ಜನತೆಯ ಆರೋಗ್ಯದ ಬದುಕಿನ ಪ್ರಶ್ನೆಯಾಗಿದೆ, ಅವರು ಕುಡಿಯುವ ನೀರಿನ ಪ್ರಶ್ನೆಯಾಗಿದೆ, ಇದರಲ್ಲಿ ಬೇಜವಾಬ್ದಾರಿ, ಅಸಡ್ಡೆ ತೋರಿಸಲು ಕಾರಣಗಳೇನು?

ಶ್ರೀ ಎಂ.ವೈ. ಘೋರ್ಪಡೆ : ಇದರಲ್ಲಿ ಅಸಡ್ಡೆ ಪ್ರಶ್ನೆ ಬರುವುದಿಲ್ಲ, ಇದು ಫಿಲ್ ಅಂಡ್ ಡ್ರಾ ಟೈಪ್ ಸ್ಕೀಮ್ಸ್ ಎರಡು ಹಳ್ಳಿಗಳಿಗೆ ಅನ್ವಯಿಸಲಾಗುತ್ತದೆ. ಇದರ ಜೊತೆಗೆ 7 ಹಳ್ಳಿಗಳಲ್ಲಿ ಈ ಯಂತ್ರವನ್ನು ಕೂಡಿಸಿದ್ದೇವೆ. ಕೇಂದ್ರದಿಂದ ನಮಗೆ ಎಷ್ಟು ಹಣ ಬಂದಿದೆ, ಅಷ್ಟು ಖರ್ಚಾಗಿದೆ. ಇದನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ. ಇದು ಯಶಸ್ವಿಯಾದರೆ, ಎಲ್ಲೆಲ್ಲಿ ಇದರ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಇದನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ; ಇದರಲ್ಲಿ ಅಸಡ್ಡೆ-ಆಗಿದೆ ಎಂದು ನನಗನಿಸುವುದಿಲ್ಲ. ಕೇಂದ್ರ ಸರ್ಕಾರದಿಂದ ಈ ಕಾರ್ಯಕ್ರಮಕ್ಕಾಗಿ ಹಣ ಬಂದಿದೆ ಹಾಗೂ ಬರುತ್ತಾ ಇದೆ. ನಿಮಗೆ ಹೇಳಬೇಕಾದರೆ ಈಗ 90 ಲಕ್ಷ ರೂಪಾಯಿಗಳ ಎಸ್ಟಿಮೇಟ್‌ನ್ನು ತಯಾರುಮಾಡಿದ್ದೇವೆ. ಇದರಲ್ಲಿ ಖರ್ಚು 46 ಲಕ್ಷ ರೂಪಾಯಿ ಆಗಿದೆ. ಒಂದೆರಡು ಕಡೆಗಳಲ್ಲಿ ತೊಂದರೆ ಆಗಿದೆ. ವಿದ್ಯುತ್‌ಚ್ಛಕ್ತಿ ಬರದೇ ಇರುವುದರಿಂದ ಒಂದೆರೆಡು ಗ್ರಾಮಗಳಲ್ಲಿ ತೊಂದರೆ ಆಗಿದೆ. ಅವುಗಳನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇವೆ. ಒಟ್ಟಿನಲ್ಲಿ ಈ ಕಾರ್ಯಕ್ರಮ ಏನು ಇದೆ ಬಹಳ ಒಳ್ಳೆಯ ಕಾರ್ಯಕ್ರಮ. ಇದನ್ನು ನಾವು ಮುಂದುವರಿಸಿಕೊಂಡು ಹೋಗುತ್ತೇವೆ.

ಶ್ರೀ ಕೆ. ಹರ್ಷಕುಮಾರ ಗೌಡ : ನಮಗೆ ತಿಳಿದ ಮಟ್ಟಿಗೆ, ಆಂಧ್ರ ಮತ್ತು ತಮಿಳುನಾಡಿನಲ್ಲಿ ಸಂಪೂರ್ಣವಾಗಿ ಜಾರಿಗೆ ತಂದಿದ್ದಾರೆ. ಈ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಿದ್ದುದು ಈ ಯೋಜನೆಯನ್ನು ಯಾವಾಗ? ಏಕೆಂದರೆ, ಆರಂಭಿಕ ಹಂತ, ಪ್ರಾಯೋಗಿಕ ಹಂತ ಎಂದು ಹೇಳುತ್ತಿದ್ದೀರಿ. ಆಂಧ್ರಪ್ರದೇಶದಲ್ಲಿ ಸಂಪೂರ್ಣವಾಗಿ ಅಳವಡಿಸಿದ್ದಾರೆ. ನಮಗೆ ತಿಳಿದ ಮಟ್ಟಿಗೆ ಅಧಿಕಾರಿಗಳ ಒಂದು ಬೇಜವಾಬ್ದಾರಿತನದಿಂದಾಗಿ ಈ ಕಾರ್ಯಕ್ರಮ ಪ್ರಾರಂಭವಾಗಿಲ್ಲ ಎಂದೆನಿಸುತ್ತದೆ. ಅದಕ್ಕೆ ತಾವು ಉತ್ತರ ಕೊಡಬೇಕು.

SRI M.Y. GHORPADE : Madam, I have already said Rs. 46 lakhs have been relased. 20.2.91 ಒಂದು ಗೌರ್ನಮೆಂಟ್ ಆರ್ಡರ್ ಇದೆ. ಆ ನಂತರ ಹಣ ರಿಲೀಸ್ ಆಗಿದೆ. Therefore there is no great delay. We have taken up 7 villages. We have set up pump sets in 2 villages. There is no such delay in this programme.

ಶ್ರೀ ಕೆ. ಹರ್ಷಕುಮಾರ್ ಗೌಡ : ತಾವು ಮೊದಲೂ ಗ್ರಾಮೀಣಭಿವೃದ್ಧಿ ಮಂತ್ರಿಗಳಾಗಿದ್ದಿರಿ. ಈಗಲೂ ಆಗಿದ್ದೀರಿ. ಆಂಧ್ರದ ಎಲ್ಲಾ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮ ಆಗಿದೆ. ನಮ್ಮಲ್ಲಿ ಏಕೆ ಆಗಿಲ್ಲ? ಡಿಲೇ ಆಗಿಲ್ಲ ಎಂದು ಹೇಳಬಹುದು. ಆಂಧ್ರದಲ್ಲಿ ಮಂಡಲ ಮಟ್ಟದಲ್ಲಿ ಆಗಿದೆ. ಕೇಂದ್ರದಿಂದ ಬರತಕ್ಕ ಸೌಲಭ್ಯಗಳನ್ನು ರಾಜ್ಯಕ್ಕೆ ತೆಗೆದುಕೊಳ್ಳುವುದರಲ್ಲಿ ಅಧಿಕಾರಿಗಳ ವೈಫಲ್ಯ ಎದ್ದು ಕಾಣುತ್ತದೆ. ಅದಕ್ಕಾಗಿ ಈ ಪ್ರಶ್ನೆ ಕೇಳಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ತಮಗೆ ಗೊತ್ತಿರುವ ಹಾಗೆ ಟೆಕ್ನಿಕಲ್ ಮಿಷನ್ ಪ್ರಕಾರ ಮಾಡಿರತಕ್ಕ ಕಾರ್ಯಕ್ರಮ. ಇದನ್ನು ಕೆಲವೇ ಹಳ್ಳಿಗಳಲ್ಲಿ ತೆಗೆದುಕೊಂಡಿರುವುದು ನಿಜ. ಈ ಒಂದು ಅನುಭವದಿಂದ ಇನ್ನೂ ಕೆಲವು ಹಳ್ಳಿಗಳಲ್ಲಿ ಇದೇ ಕಾರ್ಯಕ್ರಮ ಮುಂದುವರಿಸಬೇಕೆಂದು ತಮ್ಮ ಅಭಿಪ್ರಾಯ ಇದ್ದರೆ ಇದರ ಬಗ್ಗೆ ನಾನು ಸಹಕಾರ ಕೊಡುವುದಕ್ಕೆ ತಯಾರು ಇದ್ದೇನೆ. ಇದು ಕೇಂದ್ರ ಸರ್ಕಾರದ ಒಂದು ಕಾರ್ಯಕ್ರಮ.

ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಭಾರಿ ಮತ್ತು ಕಿರು ನೀರು ಸರಬರಾಜು ಯೋಜನೆಗಳ ಸಂಖ್ಯೆ

1056-ಶ್ರೀ ಸಾದತ್ ಅಲಿ ಖಾನ್ (ಚೆನ್ನಪಟ್ಟಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *1989-90, 1990-91 ಮತ್ತು 1991-92 ಇಲ್ಲಿಯವರೆಗೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೈಗೆತ್ತಿಕೊಳ್ಳಲಾದ ಭಾರಿ ನೀರು ಸರಬರಾಜು ಯೋಜನೆ ಮತ್ತು ಕಿರುನೀರು ಸರಬರಾಜು ಯೋಜನೆಗಳ ಒಟ್ಟು ಸಂಖ್ಯೆ (ಹಳ್ಳಿವಾರು ವಿವರಗಳನ್ನು ಒದಗಿಸುವುದು)?*

2) *ಮೇಲಿನ ತಾಲ್ಲೂಕಿನಲ್ಲಿ ಕಟ್ಟಬೇಕಾಗಿರುವ ಟಾಕಿ ಉಳಿದಿರುವ ತೊಟ್ಟಿಗಳ ಸಂಖ್ಯೆ (ಹಳ್ಳಿವಾರು ವಿವರಗಳನ್ನು ಒದಗಿಸುವುದು)?*

3) *ಯಾವಾಗ ಇವುಗಳನ್ನು ಪೂರ್ಣಗೊಳಿಸಲಾಗುವುದು?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಚನ್ನಪಟ್ಟಣ ತಾಲ್ಲೂಕಿನಲ್ಲಿ **ಕೈಗೆತ್ತಿಕೊಳ್ಳಲಾದ** ಭಾರಿ ನೀರು ಸರಬರಾಜು ಯೋಜನೆಗಳ ಮತ್ತು ಕಿರು ನೀರು ಸರಬರಾಜು ಯೋಜನೆಗಳ ಸಂಖ್ಯೆ ಈ ಕೆಳಕಂಡಂತಿದೆ:

	ಭಾರಿ ನೀರು ಸರಬರಾಜು ಯೋಜನೆ ಸರಬರಾಜು (ಕೊಳ್ಳಾಯಿ ನೀರು ಸರಬರಾಜು ಯೋಜನೆ)	*ಕಿರು ನೀರು ಯೋಜನೆ*
1989-90	11	8
1990-91	18	12
1991-92	5	4
1992-93	ಈವರೆಗೆ 1	4